## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿರಿಯ ನಾಗರೀಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ ಪಡೆಯಲು ಇದ್ದ ವಯಸ್ಸನ್ನು 65 ರಿಂದ 60 ಕ್ಕೆ ಇಳಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ:ಸಾರಿಇ 11 ಸಾಸಂಇ 2012,ಬೆಂಗಳೂರು,ದಿನಾಂಕ:24.12.2012.**
**ಯೂನಿಕ್ ಸಂಖ್ಯೆ:69/2012,ದಿನಾಂಕ:24.12.2012.**

ಓದಲಾಗಿದೆ :- 1) ಸರ್ಕಾರದ ಆದೇಶ ಸಂಖ್ಯೆ:ಸಾರಿಇ 45 ನಸಾಇ 2008, ದಿನಾಂಕ:08.09.2012.
2) ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ,ಬೆಂಗಳೂರು ರವರ ಪತ್ರ ಸಂಖ್ಯೆ:ಕರಾಸಾ:ಕೇಕ:ಸಂ:ಸಿ2:952:332:2012-13, ದಿ:17.4.2012.
3) ವ್ಯವಸ್ಥಾಪಕ ನಿರ್ದೇಶಕರು,ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ,ಬೆಂಗಳೂರು ರವರ ಪತ್ರ ಸಂಖ್ಯೆ:ಬೆಂ.ಮ.ಸಾ.ಸಂಸ್ಥೆ:ಕೇಕ:ಸಂವ್ಯ:ಆ:689:2012-13,ದಿ:28.5.2012.
4) ವ್ಯವಸ್ಥಾಪಕ ನಿರ್ದೇಶಕರು,ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,ಹುಬ್ಬಳ್ಳಿ ರವರ ಪತ್ರ ಸಂಖ್ಯೆ:ವಾಕರಸಾ:ಕೇಕ:ಸಂ:ಹು:ಪಾಸ:1109, ದಿ:10/11.4.2012.
5) ವ್ಯವಸ್ಥಾಪಕ ನಿರ್ದೇಶಕರು,ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,ಗುಲಬರ್ಗಾ ರವರ ಪತ್ರ ಸಂಖ್ಯೆ:ಈಕರಸಾ:ಕೇಕ:ಸಂ:ಪಾಸ್:108:2011-12, ದಿ:10.4.2012.

* * * * *

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಆದೇಶದಲ್ಲಿ ಆಯವ್ಯಯದಲ್ಲಿ ಘೋಷಿಸಿರುವಂತೆ 65 ಹಾಗೂ ಹೆಚ್ಚು ವಯಸ್ಸಿನ ಹಿರಿಯ ನಾಗರೀಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ,ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ,ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಪ್ರಯಾಣಿಸಲು ಅವರು ಪಡೆದ ಟಿಕೇಟಿನ ದರದಲ್ಲಿ ಶೇ.25ರಷ್ಟು ರಿಯಾಯಿತಿ ನೀಡಲು ವಾಸ್ತವವಾಗಿ ಸದರಿ ಹಿರಿಯ ನಾಗರೀಕರಿಗೆ ವಿತರಿಸಲಾಗುವ ಟಿಕೇಟುಗಳ ಪ್ರಯಾಣ ಮತ್ತು ಮೌಲ್ಯದ ವಿವರಗಳನ್ನು ಪಡೆದು ಮರುಪಾವತಿ ಮಾಡುವ ಷರತ್ತಿಗೊಳಪಟ್ಟು ಜಾರಿಗೆ ಬರುವಂತೆ ಆದೇಶವನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ (2) ರಿಂದ (5) ರವರೆಗಿನ ಸದರಿ ಸಾರಿಗೆ ಸಂಸ್ಥೆಗಳ ಪತ್ರದಲ್ಲಿ ಹಿರಿಯ ನಾಗರೀಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ ಪಡೆಯಲು ಇದ್ದ ವಯಸ್ಸಿನ ಮಿತಿಯನ್ನು 65 ರಿಂದ 60ಕ್ಕೆ ಇಳಸುವ ಕುರಿತು ಪರಿಗಣಿಸಿದಲ್ಲಿ ಆರ್ಥಿಕ ವೆಚ್ಚ ಹಾಲಿ ಇರುವುದಕ್ಕಿಂತ ಕನಿಷ್ಟ ಮೂರು ಪಟ್ಟು ಹೆಚ್ಚಾಗುವ ಸಂಭವವಿರುತ್ತದೆ. ಸದರಿ ಪ್ರಯಾಣಿಕರು ಆರೋಗ್ಯವಂತರಾಗಿ ಮತ್ತು ದೃಢಕಾಯರಾಗಿದ್ದು, ಸಾಕಷ್ಟು ಬಸ್ ಪ್ರಯಾಣ ಮಾಡಲು ಶಕ್ತರಾಗಿರುವುದರಿಂದ 65 ರಿಂದ 60 ವರ್ಷಕ್ಕೆ ಮಿತಿಯನ್ನು ಇಳಿಸಿದಲ್ಲಿ ಹಾಲಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆಯು ಮೂರುಪಟ್ಟು ಆಗಬಹುದು. ಸದರಿ ಪ್ರಯಾಣದ ವೆಚ್ಚವು ಸಂಸ್ಥೆಗಳಿಗೆ ಸೇರಿ ಸದ್ಯ ಸರಾಸರಿ ವರ್ಷಕ್ಕೆ 2.7 ಕೋಟಿ ಜನ ಈ ಸೌಲಭ್ಯ ಪಡೆಯುತ್ತಿದ್ದು, ವಯಸ್ಸಿನ ಮಿತಿ ಇಳಿಸಿದರೆ ಈ ಸೌಲಭ್ಯ ಪಡೆಯುವವರ ಸಂಖ್ಯೆ 6 ಕೋಟಿಗೆ ತಲುಪುವುದಾಗಿ ಹಾಗೂ ವೆಚ್ಚ ರೂ.60 ರಿಂದ 65 ಕೋಟಿಗೆ ತಲುಪುವುದಾಗಿ ಅಂದಾಜಿಸಲಾಗಿದ್ದು, ಈ ವೆಚ್ಚವನ್ನು ಸರ್ಕಾರ ಪೂರ್ಣ ಪ್ರಮಾಣದಲ್ಲಿ ಸಾರಿಗೆ ಸಂಸ್ಥೆಗಳಿಗೆ ಮರುಪಾವತಿ ಮಾಡುವುದಾದಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಸದರಿ ಸಂಸ್ಥೆಯವರು ಪ್ರಸ್ತಾಪಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

The Maintenance and Welfare of Parents and Senior Citizens Act 2007ರನ್ವಯ ಹಿರಿಯ ನಾಗರಿಕರ ಬಸ್ ಪಾಸ್ ಪಡೆಯಲು ನಿಗಧಿಗೊಳಿಸಿರುವ 65 ವರ್ಷ ವಯೋಮಿತಿಯನ್ನು ಮಾರ್ಪಡಿಸಿ, 60 ವರ್ಷಕ್ಕೆ ಇಳಿಸಿ, ಇದಕ್ಕೆ ತಗಲುವ ವೆಚ್ಚದ ಶೇ.75ರಷ್ಟನ್ನು ಹಿರಿಯ ನಾಗರೀಕ ಪ್ರಯಾಣಿಕರಿಂದ ಭರಿಸಲು, ಉಳಿದ ಶೇ.25ರಲ್ಲಿ ಶೇ.50ರಷ್ಟು, ಅಂದರೆ ಶೇ.12.5ರಷ್ಟನ್ನು ಸರ್ಕಾರದಿಂದಲೂ, ಶೇ.12.5ರಷ್ಟನ್ನು ರಾಜ್ಯ ಸಾರಿಗೆ ಸಂಸ್ಥೆಗಳು ಭರಿಸುವ ಷರತ್ತಿಗೊಳಪಟ್ಟು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 1065 ವೆಚ್ಚ-12/2012, ದಿನಾಂಕ:22.12.2012ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಬೀರೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಾರಿಗೆ ಇಲಾಖೆ.
ದೂ:22032292

ಗೆ:-

1) ಮಹಾಲೇಖಪಾಲರು,ಕರ್ನಾಟಕ,ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ,ಆರ್ಥಿಕ ಇಲಾಖೆ,ವಿಧಾನ ಸೌಧ,ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು,ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು,ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ.
6) ವ್ಯವಸ್ಥಾಪಕ ನಿರ್ದೇಶಕರು,ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲಬರ್ಗಾ.
7) ಆಯುಕ್ತರು,ಸಾರಿಗೆ ಮತ್ತು ರಸ್ತೆ ಸುರಕ್ಷತೆ,ಬೆಂಗಳೂರು.
8) ಜಂಟಿ ನಿರ್ದೇಶಕರು,ರಾಜ್ಯ ಹುಜೂರು ಖಜಾನೆ ಇಲಾಖೆ,ಬೆಂಗಳೂರು.
9) ಮಾನ್ಯ ಉಪಮುಖ್ಯಮಂತ್ರಿಯವರು (ಗೃಹ ಮತ್ತು ಸಾರಿಗೆ) ರವರ ಆಪ್ತ ಕಾರ್ಯದರ್ಶಿ.
10) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ,ಸಾರಿಗೆ ಇಲಾಖೆ.
11) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು,ಸಾರಿಗೆ ಇಲಾಖೆ.
12) ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.